19)	ಧಾರವಾಡ	14	1	8	—
20)	ಗದಗ	24	—	3	—
21)	ಹಾವೇರಿ	34	2	4	—
22)	ಕಾರವಾರ	27	—	2	—
23)	ಗುಲ್ಬರ್ಗಾ	84	2	18	—
24)	ರಾಯಚೂರು	35	1	8	—
25)	ಕೊಪ್ಪಳ	27	2	4	—
26)	ಬಳ್ಳಾರಿ	45	2	6	—
27)	ಬೀದರ್	36	—	13	—
	ಒಟ್ಟು	1064	62	239	—

ಬಿ.ಸಿ.ಎಂ. ಇಲಾಖೆಯ ಹಾಸ್ಟೆಲ್ ಕಟ್ಟಡಗಳ ನಿರ್ಮಾಣ.

3383(4395) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿರುವ ಬಿ.ಸಿ.ಎಂ. ಇಲಾಖೆಯ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ವಸತಿನಿಲಯಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಇವುಗಳಲ್ಲಿ ಎಷ್ಟು ಹಾಸ್ಟೆಲ್‌ಗಳಿಗೆ ಕಟ್ಟಡಗಳು ಇವೆ?

ಇ) ಬೆಳಗಾಂ ಜಿಲ್ಲೆಯಲ್ಲಿ ಬಿ.ಸಿ.ಎಂ. ಇಲಾಖೆಯ ಹಾಸ್ಟೆಲ್‌ಗಳಿಗೆ ಕಟ್ಟಡಗಳಿಲ್ಲದೆ ಇರುವುವುಗಳೆಷ್ಟು ಸರ್ಕಾರ ಈ ಕಟ್ಟಡಗಳನ್ನು ಕಟ್ಟಲು ಯಾವ ಕಾರ್ಯಕ್ರಮ ಹಾಕಿಕೊಂಡಿದೆ (ತಾಲ್ಲೂಕುವಾರು)

ಈ) ಬೈಲಹೊಂಗಲ ಮತ ಕ್ಷೇತ್ರದಲ್ಲಿ ಹಾಸ್ಟೆಲ್‌ಗಳಿಗೆ ಕಟ್ಟಡಗಳಿರದೇ ಇರುವುವುಗಳ ಸಂಖ್ಯೆ ಎಷ್ಟು?

ಉ) ಹಾಸ್ಟೆಲ್ ಕಟ್ಟಲು ಗ್ರಾಮದವರು ಜಾಗವನ್ನು ನೀಡಿದ್ದರೂ ಸಹ ಇನ್ನೂವರೆಗೆ ಕಟ್ಟಡ ಕಟ್ಟಲು ವಿಳಂಬವಾಗುತ್ತಿರಲು ಕಾರಣಗಳೇನು?

ಊ) ಜಾಗ ಕೊಟ್ಟ ಬೈಲಹೊಂಗಲ ಮತಕ್ಷೇತ್ರದ ಗ್ರಾಮಗಳಲ್ಲಿ ಎಂದು ಹಾಸ್ಟೆಲ್ ಕಟ್ಟಡ ಕಟ್ಟಲಾಗುವುದು.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಇಲಾಖೆಯಡಿಯಲ್ಲಿರುವ ವಿದ್ಯಾರ್ಥಿನಿಲಯಗಳ ವಿವರ

	ಒಟ್ಟು ವಿದ್ಯಾರ್ಥಿ ನಿಲಯಗಳು	ಸ್ವಂತ ಕಟ್ಟಡ ಹೊಂದಿರುವ ವಿದ್ಯಾರ್ಥಿ ನಿಲಯಗಳು
ಮೆಟ್ರಿಕ್ ಪೂರ್ವ	1132	581
ಮೆಟ್ರಿಕ್ ನಂತರ	208	50

(ಜಿಲ್ಲಾವಾರು ಮಾಹಿತಿ ಅನುಬಂಧ-1 ರಲ್ಲಿದೆ)

ಆ) ಬೆಳಗಾಂ ಜಿಲ್ಲೆಯ 34 ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ಇರುವುದಿಲ್ಲ. (ವಿವರ ಅನುಬಂಧ-2ರಲ್ಲಿದೆ)

ಇ) ನಿವೇಶನಗಳ ಲಭ್ಯತೆ ಹಾಗೂ ಆಯವ್ಯಯದಲ್ಲಿನ ಹಣದ ಲಭ್ಯತೆಗನುಸಾರವಾಗಿ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ ಕೈಗೆತ್ತಿಕೊಳ್ಳಲಾಗುವುದು.

ಈ) 4 ವಿದ್ಯಾರ್ಥಿನಿಲಯಗಳು.

ಉ) ನಯಾನಗರ ಮತ್ತು ದೊಡ್ಡವಾಡ ಗ್ರಾಮಗಳಲ್ಲಿ ನಿವೇಶನ ಲಭ್ಯವಿದ್ದು ಆಯವ್ಯಯದಲ್ಲಿ ಹಣದ ಲಭ್ಯತೆಯನುಸರಿಸಿ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಿಸಲಾಗುವುದು

ಊ) ಬೈಲಹೊಂಗಲದಲ್ಲಿ ವಿದ್ಯಾರ್ಥಿನಿಲಯವನ್ನು ಆಯವ್ಯಯದಲ್ಲಿನ ಹಣದ ಲಭ್ಯತೆ ಆಧರಿಸಿ ಕ್ರಮ ಜರುಗಿಸಲಾಗುವುದು.

ಚಿತ್ರದುರ್ಗ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ.

3385(4128) ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು (ಶಿವಾಜಿನಗರ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ರಾಜ್ಯದ ನೀರಿನ ಸಮಸ್ಯೆಯನ್ನು ಎದುರಿಸುತ್ತಿರುವ ಜಿಲ್ಲೆಗಳಾವುವು? (ತಾಲ್ಲೂಕುವಾರು ಮಾಹಿತಿ ನೀಡುವುದು)

2. ಚಿತ್ರದುರ್ಗ ಜಿಲ್ಲೆ ಹಲವಾರು ವರ್ಷಗಳಿಂದ ನೀರಿನ ಭವಣೆಯಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?